# ರಾಮಕೃಷ್ಣ ಮಠ ಮತ್ತು ಮಿಷನ್—ಒಂದು ವಿವರಣೆ

◆ ಸ್ವಾಮಿ ರಾಘವೇಶಾನಂದ

ಒಂದು ದಿನ ನಾನು ಆಶ್ರಮದ ತೋಟದಲ್ಲಿ ಓಡಾಡುತ್ತಿದ್ದಾಗ, ಒಬ್ಬ ತರುಣ ನನ್ನನ್ನು ಭೇಟಿಯಾದ. ಸುಮಾರು ೩೦ ವರ್ಷ ವಯಸ್ಸು ಇದ್ದಿರಬಹುದು. ಅವನ ಮುಖ ನೋಡಿದಾಗಲೇ ಅವನ ಮನಸ್ಸಿನಲ್ಲಿ ಬೇಕಾದಷ್ಟು ಸಂದೇಹಗಳಿವೆ. ಅವುಗಳನ್ನು ಬಗೆಹರಿಸಿಕೊಳ್ಳಲು ತವಕಿಸುತ್ತಿದ್ದಾನೆ ಎಂದು ಗೊತ್ತಾಯಿತು. ಹತ್ತಿರ ಬಂದು ನಮ್ರತೆಯಿಂದ ನಮಸ್ಕರಿಸಿ ಮಾತು ಪ್ರಾರಂಭಿಸಿದ: "ಸ್ವಾಮೀಜಿ, ಒಂದೆರಡು ತಿಂಗಳಿಂದ ನಾನು ಆಶ್ರಮಕ್ಕೆ ಬರುತ್ತಿದ್ದೇನೆ. ಆದರೆ ಯಾವ ಸಂತರನ್ನೂ ಭೇಟಿಯಾಗಿಲ್ಲ. ಈ ಆಶ್ರಮದ ವಾತಾವರಣ ತುಂಬ ಹಿಡಿಸಿದೆ. ನನಗೆ ಪ್ರಾಪಂಚಿಕ ಜೀವನದಲ್ಲಿ ಆಸಕ್ತಿಯಿಲ್ಲ. ನಿಮ್ಮಂತೆಯೇ ನಾನೂ ಸಂನ್ಯಾಸಿಯಾಗಿ ಆಧ್ಯಾತ್ಮಿಕ ಜೀವನ ನಡೆಸಲು ಇಚ್ಛಿಸುತ್ತೇನೆ. ಅದಕ್ಕೆ ಏನು ನಿಯಮಗಳು ತಿಳಿಸುತ್ತೀರಾ?" ಸುಮಾರು ಒಂದು ಘಂಟೆ ಕಾಲ ಮಾತುಕತೆ ನಡೆಯಿತು. ಅವನ ಜೊತೆಯಲ್ಲಿ ಅವನ ಅಕ್ಕ ಕೂಡ ಬಂದಿದ್ದಳು. ಆಕೆ ಮಂದಿರದಲ್ಲಿ ಕುಳಿತಿದ್ದಳು. ನಮ್ಮ ಮಾತುಕತೆ ನಡೆಯುತ್ತಿದ್ದಂತೆ ಅವಳೂ ಬಂದು ಅಪ್ಪಣೆ ಪಡೆದು, ಮಾತುಕತೆಯಲ್ಲಿ ಸೇರಿಕೊಂಡಳು. ಅವರಿಬ್ಬರ ಹೆಸರು ಚೈತನ್ಯ ಹಾಗೂ ರಮ್ಯ. ಇಬ್ಬರೂ ವಿದ್ಯಾಭ್ಯಾಸ ಮುಗಿಸಿ ಒಳ್ಳೆಯ ಕೆಲಸದಲ್ಲಿದ್ದರು. ಈ ವಯಸ್ಸಿನ ಹಲವಾರು ಯುವಕ-ಯುವತಿಯರಿಗೆ ಇಂತಹ ಕುತೂಹಲ ಬರುವುದು ಸಹಜವಾದುದರಿಂದ ಅಂದು ನಡೆದ ಸಂಭಾಷಣೆಯನ್ನು ಲೇಖನರೂಪದಲ್ಲಿ ಬರೆದಿದ್ದೇನೆ.

**ಚೈತನ್ಯ: ಸ್ವಾಮೀಜಿ, ನಾನು ಮತ್ತೆ ಕೇಳುತ್ತಿದ್ದೇನೆ. ನನಗೂ ಆಶ್ರಮ ಸೇರಿ ಸಂನ್ಯಾಸಿಯಾಗಲು ಸಾಧ್ಯವಿದೆಯೆ?**

**ನಾನು:** ನೋಡು, ಅದು ನಿನ್ನ ನಿರ್ಧಾರಕ್ಕೆ ಬಿಟ್ಟದ್ದು. ಆದರೆ ಆ ಹೆಜ್ಜೆ ಇಡುವ ಮುಂಚೆ ತೀವ್ರವಾಗಿ ಆಲೋಚಿಸಬೇಕು. ಅದರಲ್ಲೂ ರಾಮಕೃಷ್ಣ ಮಹಾಸಂಘಕ್ಕೆ ಸೇರಿ ಸಂನ್ಯಾಸಿಯಾಗಬೇಕೆಂದಿದ್ದರೆ ನಿನ್ನ ಮನೋಬಲವನ್ನು ಚೆನ್ನಾಗಿ ಪರೀಕ್ಷಿಸಿಕೊಳ್ಳಬೇಕು. ಉಪನಿಷತ್ತು ಹೇಳುವಂತೆ ಸಂನ್ಯಾಸಿಯ ಜೀವನ ಕತ್ತಿಯ ಮೇಲೆ ನಡೆಯುವುದಕ್ಕಿಂತಲೂ ಕಷ್ಟತರವಾದುದು. ಸೇರುವ ಮೊದಲು ರಾಮಕೃಷ್ಣ ಮಹಾಸಂಘದ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕು. ಅದಕ್ಕೆ ಶ್ರೀರಾಮಕೃಷ್ಣ ಸಂಸ್ಥೆಯಿಂದ ಪ್ರಕಟವಾಗಿರುವ ಶ್ರೀರಾಮಕೃಷ್ಣ, ವಿವೇಕಾನಂದ ಹಾಗೂ ಶ್ರೀಮಾತೆಯವರ ಜೀವನ ಹಾಗೂ ಉಪದೇಶಗಳನ್ನು ಚೆನ್ನಾಗಿ ಓದಬೇಕು. ಆಶ್ರಮದೊಡನೆ ಒಂದು ವರ್ಷವಾದರೂ ಸಂಪರ್ಕ ಬೆಳೆಸಿಕೊಂಡು ಈ ಜೀವನದ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಬೇಕು.

**ಚೈತನ್ಯ : ಸಣ್ಣ ಪುಟ್ಟ ಪುಸ್ತಕಗಳನ್ನು ಓದಿದ್ದೇನೆ, ಸ್ವಾಮೀಜಿ. ಸ್ವಾಮಿ ವಿವೇಕಾನಂದರ ಪುಸ್ತಕಗಳಂತೂ ನನ್ನ ಮೇಲೆ ತುಂಬಾ ಪ್ರಭಾವ ಬೀರುತ್ತಿವೆ. ವಿವೇಕಾನಂದರ ಕೃತಿಶ್ರೇಣಿಯನ್ನು ಕೊಂಡುಕೊಂಡಿದ್ದೇನೆ. ಅದರಲ್ಲಿ ಯಾವುದನ್ನು ಮೊದಲು ಓದಲಿ ತಿಳಿಸಿ.**

**ನಾನು :** ಕೃತಿಶ್ರೇಣಿಯಲ್ಲಿ ಯಾವುದು ಮುಖ್ಯ ಯಾವುದು ಅಮುಖ್ಯ ಎನ್ನುವುದಿಲ್ಲ. ಆದರೂ ನಮ್ಮ ಸಂಘದ ಹಿಂದಿನ ಅಧ್ಯಕ್ಷರಾದ ಸ್ವಾಮಿ ರಂಗನಾಥಾನಂದಜಿಯವರು ಯುವಕ, ಯುವತಿಯರಿಗೆ **'ಕೊಲಂಬೋ ಇಂದ ಆಲ್ಮೋರಕೆ'** ಹಾಗೂ **'ವಿವೇಕಾನಂದರ ಪತ್ರಮಾಲೆ'**ಯನ್ನು ಮೊದಲು ಓದುವಂತೆ ಪ್ರೋತ್ಸಾಹಿಸುತ್ತಿದ್ದರು. ಆದುದರಿಂದ ಅಲ್ಲಿಂದಲೇ ಶುರುಮಾಡು.

**ಚೈತನ್ಯ: ಸ್ವಾಮೀಜಿ, ರಾಮಕೃಷ್ಣ ಸಂಘ ಹಾಗೂ ಅದರ ಕಾರ್ಯಗಳ ಹಿನ್ನೆಲೆ, ತತ್ತ್ವಗಳನ್ನು ದಯವಿಟ್ಟು ತಿಳಿಸಿ.**

**ನಾನು:** ಇದೊಂದು ದೊಡ್ಡ ಕಥೆ. ಸಂಕ್ಷಿಪ್ತವಾಗಿ ಹೇಳುವುದು ಕಷ್ಟ. ಆದರೂ ಸಾಧ್ಯವಾದಷ್ಟೂ ಪ್ರಯತ್ನಿಸುತ್ತೇನೆ. ಈ ಸಂಘ ಒಬ್ಬ ಅವತಾರಪುರುಷನ ತಪಸ್ಸಿನ ಫಲ, ಹಾಗೂ ಅವರದೇ ಸಂಕಲ್ಪ. ಶ್ರೀರಾಮಕೃಷ್ಣರು ತಮ್ಮ ಸಾಧನೆಯೆಲ್ಲ ಮುಗಿದ ಬಳಿಕ, ತಮ್ಮ ನಂತರ ಈ ಜಗತ್ತಿನಲ್ಲಿ ನಡೆಯಬೇಕಾಗಿದ್ದ ಮಹತ್ಕಾರ್ಯದ ಸಿದ್ಧತೆಯಲ್ಲಿ ತೊಡಗಿದರು. ಅದಕ್ಕೆ ಬೇಕಾಗಿದ್ದುದು ಎಲ್ಲವನ್ನೂ ತ್ಯಾಗ ಮಾಡಿ ಸಂನ್ಯಾಸಿಜೀವನ ನಡೆಸುವ ಛಲ ಉಳ್ಳವರು. ಜಗನ್ಮಾತೆ ಅಂತಹ ಅಂತರಂಗ ಶಿಷ್ಯರು ಬರುವರೆಂದು ಅವರಿಗೆ ಒಂದು ದರ್ಶನದಲ್ಲಿ ತೋರಿಸಿದ್ದಳು. ಹಸು ತನ್ನ ಕರುವಿನ ಬರುವಿಕೆಯನ್ನೆ ಎದುರು ನೋಡುತ್ತಿರುವಂತೆ ಪರಮಹಂಸರು ತಮ್ಮ ಅಂತರಂಗಶಿಷ್ಯರ ಆಗಮನವನ್ನು ತೀವ್ರ ವ್ಯಾಕುಲತೆಯಿಂದ ನಿರೀಕ್ಷಿಸುತ್ತಿದ್ದರು. ಅನೇಕ ಶಿಷ್ಯರು ಒಬ್ಬೊಬ್ಬರಾಗಿ ಬಂದರು. ಇವರುಗಳನ್ನೆಲ್ಲಾ ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಮುಂದಿನ ಶ್ರೀರಾಮಕೃಷ್ಣ ಸಂಘವೆಂಬ ಮಹಾಯಜ್ಞಕ್ಕೆ ಸಿದ್ಧಪಡಿಸಿದರು. ಒಂದು ದಿನ ಒಬ್ಬ ಭಕ್ತನು

ಅತ್ಯಂತ ಅನೌಪಚಾರಿಕವಾದ ಮಾತುಕತೆಗಳ ಮೂಲಕ ಆಸಕ್ತರಿಗೆ ರಾಮಕೃಷ್ಣ ಮತ್ತು ಮಿಷನ್ನಿನ ಸೂಕ್ಷ್ಮ ಪರಿಚಯ ಮಾಡಿಕೊಟ್ಟಿರುವ ಸ್ವಾಮಿ ರಾಘವೇಶಾನಂದಜಿಯವರು ಬೆಳಗಾಂ ರಾಮಕೃಷ್ಣ ಮಿಷನ್ ಆಶ್ರಮದ ಕಾರ್ಯದರ್ಶಿಯಾಗಿರುವರು.

ಕೆಲವು ಸಂನ್ಯಾಸಿಗಳಿಗೆ ಕಾವಿಬಟ್ಟೆ ಹಂಚಬೇಕೆಂದಿದ್ದಾಗ, "ಇವರಿಗಿಂತ ಹೆಚ್ಚಿನ ವೈರಾಗ್ಯಮೂರ್ತಿಗಳು ನಿನಗೆ ಎಲ್ಲಿ ಸಿಕ್ಕುವರು?" ಎಂದು ಶ್ರೀರಾಮಕೃಷ್ಣರೇ ತಮ್ಮ ಯುವಕ ಶಿಷ್ಯರಲ್ಲಿ ಕೆಲವರಿಗೆ ಕಾವಿಬಟ್ಟೆ ಕೊಟ್ಟರು. ಇವರಲ್ಲಿ ಅತಿ ಮುಖ್ಯರಾದವರೆಂದರೆ ನರೇಂದ್ರ– ಮುಂದೆ ಸ್ವಾಮಿ ವಿವೇಕಾನಂದರೆಂದು ಪ್ರಖ್ಯಾತರಾದವರು. ತಮ್ಮ ಜೀವಿತದ ಕೊನೆಯ ಘಳಿಗೆಯಲ್ಲಿ ಶ್ರೀರಾಮಕೃಷ್ಣರು ನರೇಂದ್ರನನ್ನು ಬಳಿಗೆ ಕರೆದು, 'ನರೇನ್, ಈ ಬಾಲಕರನ್ನೆಲ್ಲಾ ನಿನ್ನ ವಶದಲ್ಲಿ ಬಿಡುತ್ತೇನೆ. ಅವರು ಆತ್ಮಸಾಧನೆಯಲ್ಲಿ ನಿರತರಾಗುವಂತೆ ಮಾಡು. ಪುನಃ ಸಂಸಾರಕ್ಕೆ ಮರಳದೇ ಇರುವಂತೆ ನೋಡಿಕೊ" ಎಂದು ಹೇಳಿದರು.

೧೮೮೬ರಲ್ಲಿ ಶ್ರೀರಾಮಕೃಷ್ಣರು ದೇಹತ್ಯಾಗ ಮಾಡಿದರು. ಗುರುದೇವರ ನಿಧನಾನಂತರ ತರುಣ ಶಿಷ್ಯರು ಸಂಸಾರಕ್ಕೆ ಹಿಂದಿರುಗದೆ ಮುಂದೇನು ಮಾಡಬೇಕೆಂದು ಆಲೋಚಿಸಿದರು. ಕಲ್ಕತ್ತೆಯ ಬಳಿ ಬಾರಾನಗರದಲ್ಲಿ ಒಂದು ಪಾಳು ಬಿದ್ದ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು, ಅಲ್ಲಿ ಶ್ರೀರಾಮಕೃಷ್ಣರ ಅಸ್ಥಿಯನ್ನಿಟ್ಟು ಪೂಜೆಮಾಡುತ್ತಾ, ಕಠೋರ ತಪಸ್ಸಾಧನೆಯಲ್ಲಿ ತೊಡಗಿದರು. ಅದೇ ವರ್ಷದ ಡಿಸೆಂಬರ್ ತಿಂಗಳ ೨೪ರಂದು, ಬಾಬುರಾಮ್ ಎನ್ನುವ ಶಿಷ್ಯನ ಊರಾದ ಆಂಟ್‌ಪುರ್‌ಗೆ ಅವನ ತಾಯಿಯ ಆಹ್ವಾನದ ಮೇರೆಗೆ ಹೋದರು. ಅಲ್ಲಿ ರಾತ್ರಿಯ ವೇಳೆ ಅಗ್ನಿಯನ್ನು ಹೊತ್ತಿಸಿ ಅದರ ಮುಂದೆ ಧ್ಯಾನ ಮಾಡಲು ಕುಳಿತರು. ಅಂದೇ **ಆತ್ಮನೋ ಮೋಕ್ಷಾರ್ಥಂ** (ಅಂದರೆ ತಮ್ಮ ವೈಯಕ್ತಿಕ ಮುಕ್ತಿಗಾಗಿ), **ಜಗತ್ ಹಿತಾಯ ಚ** (ಮತ್ತು ಜಗತ್ತಿನ ಹಿತಕ್ಕಾಗಿ) ಎಂಬ ಆದರ್ಶವನ್ನು ಸ್ವೀಕರಿಸಿ ಸಂನ್ಯಾಸವ್ರತವನ್ನು ಕೈಗೊಂಡರು. ಅನಂತರ ಬಾರಾನಗರಕ್ಕೆ ಬಂದ ಮೇಲೆ ಒಂದು ದಿನ ವಿರಜಾಹೋಮವನ್ನು ಮಾಡಿ ವಿಧಿವತ್ತಾಗಿ ಸಂನ್ಯಾಸ ಸ್ವೀಕರಿಸಿ ಬೇರೆ ಬೇರೆ ಹೆಸರುಗಳನ್ನು ಸ್ವೀಕರಿಸಿದರು.

ಸ್ವಾಮಿ ವಿವೇಕಾನಂದರು ಬಾರಾನಗರದಿಂದ ಹೊರಟು ಇಡೀ ಭಾರತದೇಶವನ್ನು ಪರಿವ್ರಾಜಕರಾಗಿ ಸುತ್ತಿದರು. ನಂತರ ಅಮೆರಿಕ ದೇಶದ ಚಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದರು. ಸುಮಾರು ೪ ವರ್ಷಗಳ ಕಾಲ ವಿದೇಶದಲ್ಲಿ ಧರ್ಮಪ್ರಚಾರ ಮಾಡಿ ಭಾರತಕ್ಕೆ ಹಿಂದಿರುಗಿದರು. ಅಮೆರಿಕದಲ್ಲಿದ್ದಾಗಲೇ, ಜಾತಿ, ಮತಗಳ ಸಂಕೋಲೆಗಳಿಲ್ಲದ ಒಂದು ಸಂಸ್ಥೆಯನ್ನು ಶ್ರೀರಾಮಕೃಷ್ಣರ ಹೆಸರಿನಲ್ಲಿ ಆರಂಭಿಸಬೇಕೆಂಬ ಅಭಿಲಾಷೆ ಅವರಲ್ಲಿತ್ತು. ವಿಶ್ವಧರ್ಮ ಸಮ್ಮೇಳನಕ್ಕೆ ಮೊದಲೇ ಒಂದು ಪತ್ರದಲ್ಲಿ ಹೀಗೆ ಬರೆಯುತ್ತಾರೆ: "ಭಾರತಮಾತೆಗೆ ಕನಿಷ್ಠ ಒಂದು ಸಾವಿರ ಯುವಕರ ಬಲಿ ಬೇಕು. ಪುರುಷಸಿಂಹರು, ಮೂರ್ಖರಲ್ಲ. ಮನಸ್ಸಿನಲ್ಲಿಡಿ." ಈ ಭವಿಷ್ಯದ ಚಿತ್ರವನ್ನು ಅವರು ಮನದಲ್ಲಿಟ್ಟುಕೊಂಡು ತಮ್ಮ ಸೋದರಶಿಷ್ಯರೊಡನೆ ಸಂಪರ್ಕವಿಟ್ಟುಕೊಂಡು ಅವರಲ್ಲಿ ಉತ್ಸಾಹ ತುಂಬುತ್ತಿದ್ದರು. ಭಾರತಕ್ಕೆ ಹಿಂದಿರುಗಿ ತಮ್ಮ ವಿಜಯಯಾತ್ರೆಯನ್ನು ಮುಗಿಸಿ ಮತ್ತೆ ಕೊಲ್ಕತ್ತಾಕ್ಕೆ ಬಂದರು. ಅಲ್ಲಿ ಒಂದು ದಿನ ಶ್ರೀರಾಮಕೃಷ್ಣರ ಪರಮಭಕ್ತರಾದ ಬಲರಾಮ್ ಬಾಬು ಅವರ ಮನೆಯಲ್ಲಿ ಶ್ರೀರಾಮಕೃಷ್ಣರ ಗೃಹಸ್ಥ ಹಾಗೂ ಸಂನ್ಯಾಸಿ ಭಕ್ತರನ್ನು ಕರೆಸಿ ಒಂದು ಪುಟ್ಟ ಸಭೆ ಮಾಡಿ, ಅದರಲ್ಲಿ ತಮ್ಮ ಮನಸ್ಸಿನಲ್ಲಿದ್ದ ಆಶಯವನ್ನು ಹೀಗೆ ವ್ಯಕ್ತಪಡಿಸಿದರು: "ನಾನು ಹಲವು ದೇಶಗಳನ್ನು ಸುತ್ತಿ ನೋಡಿದಾಗ ನನಗೆ ದೃಢವಾದ ನಂಬಿಕೆ ಉಂಟಾಗಿದೆ. ಸಂಘವಿಲ್ಲದೆ ಯಾವ ದೊಡ್ಡ ಕಾರ್ಯವೂ ನಡೆಯದು. ನಾನು ಯಾರ ಹೆಸರಿನ ಬಲದಿಂದ ಸಂನ್ಯಾಸಿಯಾಗಿದ್ದೇನೆಯೋ, ನೀವು ಯಾರನ್ನು ಜೀವನದಲ್ಲಿ ಆಧಾರವಾಗಿಟ್ಟುಕೊಂಡು ಗೃಹಸ್ಥಾಶ್ರಮದ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಿರೋ, ಯಾರ ಪುಣ್ಯನಾಮವೂ, ಅದ್ಭುತ ಜೀವನವೂ ದೇಹಾವಸಾನವಾದ ಇಪ್ಪತ್ತು ವರುಷಗಳ ಒಳಗೆ ಪ್ರಾಚ್ಯ ಮತ್ತು ಪಾಶ್ಚಾತ್ಯ ಜಗತ್ತಿನಲ್ಲಿ ಆಶ್ಚರ್ಯಕರವಾದ ರೀತಿಯಲ್ಲಿ ಪ್ರಸಾರವಾಗಿದೆಯೋ ಅವರ ಹೆಸರಿನಲ್ಲಿ ಈ ಸಂಘ ಪ್ರತಿಷ್ಠಿತವಾಗಲಿ. ನಾನು ಪ್ರಭುವಿನ ದಾಸ. ನೀವು ಈ ಕಾರ್ಯದಲ್ಲಿ ಸಹಾಯ ಮಾಡಬೇಕು."

ಆಗ ಅಲ್ಲಿ ನೆರೆದಿದ್ದ ಗಿರೀಶಚಂದ್ರ ಘೋಷರೇ ಮೊದಲಾದ ಗೃಹಸ್ಥರು ಈ ಸಂಕಲ್ಪವನ್ನು ಅನುಮೋದಿಸಿದರು. ಸಂಘಕ್ಕೆ 'ರಾಮಕೃಷ್ಣ ಮಿಷನ್' ಎಂದು ಹೆಸರು ಕೊಡಲಾಯಿತು.

ಇದೇ ರೀತಿ, ಸ್ವಾಮಿ ವಿವೇಕಾನಂದರು ೧೮೯೮ರಲ್ಲಿ ಕೊಲ್ಕತ್ತಾದ ಸಮೀಪದಲ್ಲಿರುವ ಬೇಲೂರು ಎಂಬಲ್ಲಿ ಮಠವನ್ನು ಅಧಿಕೃತವಾಗಿ ಸ್ಥಾಪಿಸಿ, ಒಂದು ಟ್ರಸ್ಟ್ ಡೀಡಿನ ಮೂಲಕ ಅದನ್ನು ನೋಡಿಕೊಳ್ಳಲು ಕೆಲವು ಟ್ರಸ್ಟಿಗಳನ್ನು ನೇಮಕ ಮಾಡಿದರು. ಅಧಿಕಾರವನ್ನೆಲ್ಲಾ ಅವರಿಗೆ ವಹಿಸಲಾಯಿತು.

**ಚೈತನ್ಯ: ಸ್ವಾಮೀಜಿ, ನೀವು ವಿವೇಕಾನಂದರು ಒಂದು ರಾಮಕೃಷ್ಣ ಮಿಷನ್ ಮತ್ತೊಂದು ರಾಮಕೃಷ್ಣ ಮಠವನ್ನೂ ಸ್ಥಾಪಿಸಿದರೆಂದಿರಿ. ಎರಡರ ಅಧಿಕಾರವನ್ನೂ ಸಂನ್ಯಾಸಿಗಳಿಗೇ ಒಪ್ಪಿಸಲಾಯಿತು ಎಂದಿರಿ. ಇವೆರಡಕ್ಕೂ ಇರುವ ವ್ಯತ್ಯಾಸವೇನು?**

**ನಾನು :** ಇವೆರಡಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ. ಶ್ರೀರಾಮಕೃಷ್ಣ ಮಠ ಎನ್ನುವುದು ಆಧ್ಯಾತ್ಮಿಕ ವ್ಯಕ್ತಿಗಳನ್ನು ರೂಪಿಸುವ ತರಬೇತು ಕೇಂದ್ರ. ವೇದಾಂತಪ್ರಚಾರ, ಶ್ರೀರಾಮಕೃಷ್ಣರ ದೇವಸ್ಥಾನ ಹಾಗೂ ಅವುಗಳಲ್ಲಿ ನಡೆಯುವ ಶಾಸ್ತ್ರೋಕ್ತ

ಪೂಜಾಪದ್ಧತಿಗಳು ಮುಂತಾದ ಕಾರ್ಯಗಳಲ್ಲಿ ಇದು ತೊಡಗಿದ್ದರೆ ರಾಮಕೃಷ್ಣ ಮಿಷನ್ ಸ್ಕೂಲು, ಕಾಲೇಜು, ಆಸ್ಪತ್ರೆ ಮುಂತಾದ ಸಾರ್ವಜನಿಕ ಸೇವಾಕಾರ್ಯಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವುದು. ಮಿಷನ್ನಿನ ಕೇಂದ್ರಗಳಲ್ಲಿ ಭಕ್ತರೂ ಕೂಡ ಸೇವಾಕಾರ್ಯಗಳಲ್ಲಿ ತೊಡಗಿಸಿಕೊಳ್ಳಬಹುದು. ಹಲವು ಕೇಂದ್ರಗಳಲ್ಲಿ ಆಡಳಿತ ಮಂಡಳಿಗಳಿವೆ. ಅವುಗಳಲ್ಲಿ ಗೃಹಸ್ಥರೂ ಸಕ್ರಿಯವಾಗಿ ಭಾಗವಹಿಸುತ್ತಾರೆ. ಇವೆರಡರ ಕೇಂದ್ರವೂ ಬೇಲೂರು ಮಠದಲ್ಲಿದೆ. ನಿಧಾನವಾಗಿ ದೇಶದ ಎಲ್ಲೆಡೆ ಬೇಲೂರು ಮಠದ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿನ ಶಾಖೆಗಳು ಹರಡಿದ್ದು, ಈಗ ಭಾರತದಲ್ಲಿ ೧೧೫ ಹಾಗೂ ವಿದೇಶಗಳಲ್ಲಿ ೩೮ ಶಾಖೆಗಳಿವೆ.

**ಚೈತನ್ಯ: ಸ್ವಾಮೀಜಿ, ನಮ್ಮ ಕರ್ನಾಟಕದಲ್ಲಿ ಎಷ್ಟು ಶಾಖೆಗಳಿವೆ?**

**ನಾನು:** ಕರ್ನಾಟಕದಲ್ಲಿ ಒಟ್ಟು ಏಳು ಶಾಖೆಗಳಿವೆ: ಬೆಂಗಳೂರಿನಲ್ಲಿ ೩ (ಬಸವನಗುಡಿ, ಅಲಸೂರು, ಶಿವನಹಳ್ಳಿ), ಮೈಸೂರು, ಪೊನ್ನಂಪೇಟೆ, ಮಂಗಳೂರು ಮತ್ತು ಬೆಳಗಾಂನಲ್ಲಿ ಒಂದೊಂದು.

**ಚೈತನ್ಯ : ಏನು ಹೇಳುತ್ತಿದ್ದೀರಿ ಸ್ವಾಮೀಜಿ ! ನಾನು ಕರ್ನಾಟಕದ ಹಲವಾರು ಭಾಗಗಳಲ್ಲಿ ನಿಮ್ಮ ಆಶ್ರಮಗಳನ್ನು ನೋಡಿದ್ದೇನೆ!**

**ನಾನು:** ಬಹಳ ಜನ ಹೀಗೆ ತಪ್ಪು ತಿಳಿದಿದ್ದಾರೆ. ರಾಮಕೃಷ್ಣ ಸಂಸ್ಥೆಯ ಅಧಿಕೃತ ಶಾಖೆಗಳು ಏಳು ಮಾತ್ರ. ಉಳಿದವುಗಳೆಲ್ಲಾ ಖಾಸಗಿ ಸಂಸ್ಥೆಗಳು – ರಾಮಕೃಷ್ಣ, ವಿವೇಕಾನಂದರ ಹೆಸರಿನಲ್ಲಿ ಕೆಲವು ವ್ಯಕ್ತಿಗಳು ಖಾಸಗಿಯಾಗಿ ನಡೆಸುತ್ತಿರುವ ಸಂಸ್ಥೆಗಳು. ಅವರಲ್ಲಿ ಕೆಲವರು ನಮ್ಮಿಂದ ಸಲಹೆಯನ್ನು ಪಡೆಯುತ್ತಾರೆ. ಶ್ರೀರಾಮಕೃಷ್ಣರ, ವಿವೇಕಾನಂದರ, ಶ್ರೀಮಾತೆಯವರ ಹೆಸರಿನಲ್ಲಿ ಆಧ್ಯಾತ್ಮಿಕ ಜೀವನ, ಸೇವೆಗಳನ್ನು ಯಾರು ಬೇಕಾದರೂ ನಡೆಸಬಹುದು. ಆದರೆ ಮಠ ಮತ್ತು ಮಿಷನ್ ಎಂದು ಕರೆದುಕೊಳ್ಳುವುದು ತಪ್ಪಾಗುತ್ತದೆ.

**ಚೈತನ್ಯ : ಹಾಗಾದರೆ, ನನಗೆ ಆಸೆ ಬಂದಲ್ಲಿ ನಾನೂ ಒಂದು ಆಶ್ರಮ ಆರಂಭಿಸಬಹುದೇ? ಅದಕ್ಕೆ ನಿಮ್ಮ ಅಪ್ಪಣೆ ಬೇಕಿಲ್ಲವೇ?**

**ನಾನು** : ಖಂಡಿತವಾಗಿ ನೀನು ಪ್ರಾರಂಭಿಸಬಹುದು. ನಿನಗೆ ಬೇಡ ಎನಿಸಿದರೆ ಮುಚ್ಚಲೂಬಹುದು. ಅದಕ್ಕೆ ಯಾರ ಅಪ್ಪಣೆಯೂ ಬೇಕಿಲ್ಲ.

**ಚೈತನ್ಯ : ಹೀಗೇನಾದರೂ ಆರಂಭಿಸಬೇಕೆಂದು ಇಚ್ಛೆಪಟ್ಟು, ಸಂನ್ಯಾಸಿಯಾಗಲು ಬಯಸಿದರೆ ನೀವು ಸಂನ್ಯಾಸ ಕೊಡುವಿರಾ?**

**ನಾನು** : ನನಗೆ ಕೊಡುವ ಅಧಿಕಾರವಿಲ್ಲ. ರಾಮಕೃಷ್ಣ ಮಹಾಸಂಘದಲ್ಲಿ ಸಂಘದ ಅಧ್ಯಕ್ಷರು ಆ ಸಂಘಕ್ಕೆ ಸೇರಿದ ಅಧಿಕೃತ ವ್ಯಕ್ತಿಗಳಿಗೆ ಮಾತ್ರ ಸಂನ್ಯಾಸ ನೀಡುತ್ತಾರೆ.

**ಚೈತನ್ಯ : ಹಾಗಾದರೆ ಇತರ ಆಶ್ರಮದ ಸಂನ್ಯಾಸಿಗಳೆಲ್ಲಾ ಎಲ್ಲಿ ಸಂನ್ಯಾಸ ಪಡೆಯುತ್ತಾರೆ?**

**ನಾನು** : ಅದು ನೀನು ಅವರಿಗೆ ಹಾಕಬೇಕಾದ ಪ್ರಶ್ನೆ. ಕಾಶಿಯಲ್ಲಿ, ಹರಿದ್ವಾರದಲ್ಲಿ, ಹೃಷೀಕೇಶದಲ್ಲಿ ಇತರೆ ಮಠಾಧಿಪತಿಗಳು ಸಂನ್ಯಾಸಾಶ್ರಮ ಬಯಸಿದವರಿಗೆ ಅದನ್ನು ನೀಡುತ್ತಾರೆ.

**ರಮ್ಯ** : ಸ್ವಾಮೀಜಿ, ಇವನ ಉತ್ಸಾಹವನ್ನು ನೋಡಿದರೆ, ಇಂದೇ ಸಂನ್ಯಾಸಿಯಾಗಿ, ನಾಳೆಯೇ ಒಂದು ಮಠ ಶುರು ಮಾಡಿಬಿಡುವಂತೆ ತೋರುತ್ತಿದೆ!

**ಚೈತನ್ಯ : ಅದಿರಲಿ, ಸ್ವಾಮೀಜಿ, ರಾಮಕೃಷ್ಣ ಮಠದಿಂದ ಇತರೆ ಖಾಸಗಿ ಮಠಗಳನ್ನು ಬೇರ್ಪಡಿಸಿ ಗುರುತಿಸುವುದು ಹೇಗೆ?**

**ನಾನು:** ಮೊದಲನೆಯದಾಗಿ ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್ ಎಂಬವು ನೋಂದಾಯಿತ ಸಂಸ್ಥೆಗಳು. ಆದುದರಿಂದ ಈ ಹೆಸರನ್ನು ಬೇರೆ ಯಾರೂ ಉಪಯೋಗಿಸಬಾರದು. ಅದಕ್ಕಿಂತ ಹೆಚ್ಚಾಗಿ ನಮ್ಮ ಲಾಂಛನ ಇದೆ ನೋಡು. ಇದೂ ಸಹ ನೋಂದಾಯಿಸಲ್ಪಟ್ಟಿದೆ. ಇದನ್ನು ಬೇರೆ ಯಾರೂ ಉಪಯೋಗಿಸಬಾರದು. ಇದು ಯಾವ ಮಠದಲ್ಲಿದೆಯೋ ಅದನ್ನು ಅಧಿಕೃತ ರಾಮಕೃಷ್ಣ ಮಠ ಎಂದು ತಿಳಿಯಬಹುದು.

**ಚೈತನ್ಯ: ಸ್ವಾಮೀಜಿ, ಇಂದು ನೀವು ನಮ್ಮ ಕಣ್ಣು ತೆರೆಸಿದಿರಿ. ಬಹಳಷ್ಟು ಜನಕ್ಕೆ ಈ ವ್ಯತ್ಯಾಸವೇ ಗೊತ್ತಿಲ್ಲ. ರಾಮಕೃಷ್ಣ-ವಿವೇಕಾನಂದರ ಹೆಸರಿನಲ್ಲಿರುವುದೆಲ್ಲಾ ಬೇಲೂರು ಮಠದ ಶಾಖೆಗಳೇ ಎಂದು ನಂಬಿದ್ದಾರೆ. ನಿಮ್ಮ ಮಠಕ್ಕೆ ಸೇರಲು ನಿಯಮಗಳೇನಾದರೂ ಇವೆಯೇ ಅಥವಾ ಯಾರು ಬೇಕಾದರೂ ಸೇರಬಹುದೇ?**

**ರಮ್ಯ : ಸ್ವಾಮೀಜಿ, ನಿಮ್ಮ ಮಠದಲ್ಲಿ ಕೆಲವರು ಬಿಳಿ ಬಟ್ಟೆ ಧರಿಸಿದ್ದಾರೆ, ಕೆಲವರು ಕಾವಿ ಧರಿಸಿದ್ದಾರೆ. ಇಬ್ಬರಿಗೂ ವ್ಯತ್ಯಾಸ ಏನು?**

**ನಾನು:** ಇಬ್ಬರ ಪ್ರಶ್ನೆಗೂ ಸೇರಿಯೇ ಉತ್ತರ ಹೇಳುತ್ತೇನೆ, ಕೇಳಿ. ರಾಮಕೃಷ್ಣ ಮಠವನ್ನು ಸೇರಬೇಕಾದರೆ ಹಲವಾರು ನಿಯಮಗಳಿವೆ. ಮೊದಲ ನಿಯಮವೆಂದರೆ ಅವನು ಮದುವೆಯಾಗಿರಬಾರದು, ಬ್ರಹ್ಮಚಾರಿಯಾಗಿರಬೇಕು. ಪದವಿಪೂರ್ವ

ಶಿಕ್ಷಣವನ್ನಾದರೂ ಪಡೆದಿರಬೇಕು. ೨೨ ವಯಸ್ಸಿನ ಒಳಗಿರಬೇಕು. ಪದವೀಧರರಾಗಿದ್ದರೆ, ೨೭ ವರ್ಷಗಳ ವಯೋಮಿತಿಯವರೆಗೂ ಅವಕಾಶವಿದೆ. ಸ್ನಾತಕೋತ್ತರ ಪದವೀಧರರಿಗೆಲ್ಲ ೩೦ ವರ್ಷಗಳವರೆಗೂ ಅವಕಾಶವಿದೆ. ಆಶ್ರಮಕ್ಕೆ ಸೇರುವವರನ್ನು ಮೊದಲು ಪ್ರಿ-ಪ್ರೊಬೆಷನರ್ (ಪರಿವೀಕ್ಷಣ ಅವಧಿಯಲ್ಲಿರುವವರು) ಎಂದು ಸೇರಿಸಿಕೊಳ್ಳುತ್ತಾರೆ. ಒಂದು ವರ್ಷ *ಪ್ರಿಪ್ರೊಬೇಷನರ್‌ಷಿಪ್*. ಆಗ ಅವನು ನಮ್ಮ ಅತಿಥಿಯಂತೆಯೇ ಇರುತ್ತಾನೆ. ಈ ಜೀವನ ತನಗೆ ಒಗ್ಗುವುದೇ ಎಂದು ಪರೀಕ್ಷಿಸಿಕೊಳ್ಳಲು ಅವನಿಗೆ ಅವಕಾಶ ದೊರೆಯುತ್ತದೆ. ನಾವೂ ಅವನನ್ನು ಗಮನಿಸುತ್ತಿರುತ್ತೇವೆ.

ಹಾಗೆ ಅವನಿಗೆ ಈ ಜೀವನ ಇಷ್ಟವಾದಲ್ಲಿ ನಂತರ ೨ ವರ್ಷ ಪ್ರೊಬೇಷನರ್ ಆಗಿ ಇರುತ್ತಾನೆ. ಮೂರು ವರ್ಷಗಳ ನಂತರ ಆತನನ್ನು ಬೇಲೂರು ಮಠಕ್ಕೆ ಕಳುಹಿಸಲಾಗುತ್ತದೆ. ಅಲ್ಲಿ ಎರಡು ವರ್ಷಗಳ ಕಾಲ ಶಾಸ್ತ್ರಗಳ ವಿಶೇಷ ಅಧ್ಯಯನವೇ ಮೊದಲಾದವುಗಳನ್ನು ಒಳಗೊಂಡ ತರಬೇತಿ ಕೊಡಲಾಗುತ್ತದೆ. ನಂತರ ಅವನಿಗೆ ಬ್ರಹ್ಮಚರ್ಯ ದೀಕ್ಷೆ ನೀಡಲಾಗುತ್ತದೆ. ಮುಂದಿನ ೪ ವರ್ಷಗಳು ಯಾವುದಾದರೂ ಶಾಖೆಯಲ್ಲಿ ಆತ ಸೇವೆ ಸಲ್ಲಿಸಬೇಕು. ಸಂಸ್ಥೆಯನ್ನು ಸೇರಿ ೯ ವರ್ಷಗಳ ನಂತರ ಸಂನ್ಯಾಸದೀಕ್ಷೆ ಪಡೆದು ಕಾವಿ ಧರಿಸುತ್ತಾನೆ. **ತ್ಯಾಗ ಮತ್ತು ಸೇವೆ**—ಇವುಗಳು ಇವರ ಧ್ಯೇಯ. ಇವೆರಡೂ ಇದ್ದಲ್ಲಿ ಮಾತ್ರ ಒಬ್ಬ ರಾಮಕೃಷ್ಣ ಮಹಾಸಂಘದಲ್ಲಿ ಸಂನ್ಯಾಸಿಯಾಗಲು ಸಾಧ್ಯ.

**ಚೈತನ್ಯ: ಸ್ವಾಮೀಜಿ, ನೀವು ಹೇಳುತ್ತಿರುವುದನ್ನೆಲ್ಲಾ ಕೇಳಿದರೆ, ಸ್ವಾಮಿ ವಿವೇಕಾನಂದರು ತುಂಬಾ ನಿಯಮಬದ್ಧವಾದ ಜೀವನ ನಡೆಸಲು ಯೋಜನೆ ಹಾಕಿ ಈ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ ಎಂದು ತಿಳಿಯುತ್ತದೆ. ದೇವರ ಕೃಪೆಯಿಂದ ನಾನೂ ಆಶ್ರಮ ಸೇರಲು ಎಲ್ಲಾ ಅರ್ಹತೆ ಪಡೆದಿದ್ದೇನೆ. ಸ್ವಾಮೀಜಿ, ನಾನೂ ಸಂನ್ಯಾಸಿಯಾಗುವಂತೆ ಆಶೀರ್ವದಿಸಿ.**

**ರಮ್ಯ : ಸ್ವಾಮೀಜಿ, ಸ್ತ್ರೀಯರಿಗೆ ಸಂನ್ಯಾಸ ಜೀವನ ನಡೆಸಲು ಯಾವ ಅವಕಾಶವೂ ಇಲ್ಲವೇ?**

**ನಾನು:** ರಾಮಕೃಷ್ಣ ಮಠದ ಮಾದರಿಯಲ್ಲೇ, ಸ್ತ್ರೀಯರಿಗಾಗಿಯೇ ಕೊಲ್ಕತಾದ ದಕ್ಷಿಣೇಶ್ವರದಲ್ಲಿ ಶಾರದಾ ಮಠ ಎಂಬುದಿದೆ. ಅಲ್ಲಿಯೂ ಸಹ ಇದೇ ರೀತಿಯ ನಿಯಮಗಳನ್ನು ಅನುಸರಿಸುತ್ತಾರೆ. ಮೊದಮೊದಲು ಇದನ್ನು ಸ್ಥಾಪಿಸುವುದರಲ್ಲಿ ರಾಮಕೃಷ್ಣ ಮಠವೇ ನೆರವಾಯಿತು. ನಂತರದ ವರ್ಷಗಳಲ್ಲಿ ಆಡಳಿತವನ್ನೆಲ್ಲಾ ಅಲ್ಲಿನ ಸಂನ್ಯಾಸಿನಿಯರೇ ನಿರ್ವಹಿಸುತ್ತಿದ್ದಾರೆ. ಈಗ ಅದು ಸ್ತ್ರೀಯರಿಗಾಗಿಯೇ ಇರುವ ಪ್ರತ್ಯೇಕ ಮಠವಾಗಿದೆ. ಬೆಂಗಳೂರಿನಲ್ಲಿಯೂ ಇದರ ಒಂದು ಕೇಂದ್ರವಿದೆ.

**ರಮ್ಯ : ಹಾಗಾದರೆ ನಾನೂ ಅಲ್ಲಿಗೆ ಹೋಗಿ ಇವನಿಗಿಂತ ಮುಂಚೆ ಸೇರಿಬಿಡುತ್ತೇನೆ. ಇಂತಹ ಪವಿತ್ರ ಜೀವನ ನಡೆಸಲು ಇಂತಹ ಉತ್ತಮ ಅವಕಾಶ ಮಾಡಿಕೊಟ್ಟಿರುವ ನಿಮ್ಮೆಲ್ಲರಿಗೂ ನಮ್ಮ ಕೃತಜ್ಞತೆಗಳು.**

**ನಾನು:** ನಿಮ್ಮ ಕೃತಜ್ಞತೆಯನ್ನು ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ ಹಾಗೂ ಶ್ರೀಮಾತೆಯವರಿಗೆ ಅರ್ಪಿಸಿ. ಉತ್ತಮ ಜೀವನ ನಡೆಸಿ, ಅವರ ಕೃಪೆಗೆ ಪಾತ್ರರಾಗಿ, ಧನ್ಯರಾಗಿ. *

**ರಾಮಕೃಷ್ಣ ಮಿಶನ್ನಿನ ಸೇವಾಕಾರ್ಯವು ಸ್ವಾಮಿ ವಿವೇಕಾನಂದರ ಉಪದೇಶದ ಫಲಸ್ವರೂಪವಾಗಿದೆ. ಶ್ರೀರಾಮಕೃಷ್ಣರ ಸೇವಕರು ಎಷ್ಟು ಪ್ರೀತಿಪೂರ್ವಕವಾಗಿ ಸೇವಾಕಾರ್ಯವನ್ನು ಮಾಡುತ್ತಾರೆ ಎಂಬುದನ್ನು ನಾನು ನೋಡಿದ್ದೇನೆ. ಆಧ್ಯಾತ್ಮಿಕ ನಿಷ್ಠೆಯಿಂದ ದು:ಖಿಗಳ ಸೇವೆ ಮಾಡುವ ವಿಷಯದಲ್ಲಿ ಅವರು ಅತುಲನೀಯ ದೃಷ್ಟಾಂತವಾಗಿದ್ದಾರೆ.**

– ಶ್ರೀ ವಿನೋಬಾ ಭಾವೆ

**ಸ್ವಾಮಿ ವಿವೇಕಾನಂದರಿಂದ 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎಂಬ ಧ್ಯೇಯದೊಂದಿಗೆ ಸ್ಥಾಪಿತವಾದ ಶ್ರೀರಾಮಕೃಷ್ಣ ಮಹಾಸಂಘವು ಸದ್ದುಗದ್ದಲವಿಲ್ಲದೆ ಮೆಲ್ಲಮೆಲ್ಲನೆ ಕ್ರಮಕ್ರಮೇಣ ತನ್ನ ಮಾತೃಸದೃಶವಾದ ಕರುಣಾಬಾಹುಗಳಿಂದ ಪ್ರಪಂಚವನ್ನೆಲ್ಲಾ ತಬ್ಬುತ್ತಿದೆ. ... ಆದರೆ ಅದರ ರೀತಿಯೇ ಬೇರೆ, ನೀತಿಯೇ ಬೇರೆ. ಅದು ಮತಪ್ರಚಾರದ ಸಂಸ್ಥೆಯಲ್ಲ. ಧರ್ಮಪ್ರಚಾರದ ಸಂಸ್ಥೆ. ಶ್ರೀರಾಮಕೃಷ್ಣ ಸಂಘದ ಕೇಂದ್ರೋಪಕೇಂದ್ರಗಳು ಯಾವ ಕೃತಕ ಪ್ರಚೋದನೆಯೂ ಇಲ್ಲದೆ, ಯಾವ ಲೌಕಿಕ ಪ್ರಯೋಜನದ ಉದ್ದೇಶಗಳನ್ನೂ ಒಲ್ಲದೆ, ಸ್ವಾಭಾವಿಕವಾಗಿ, ಸಂದೇಹ ಭೀತಿ ಘರ್ಷಣೆಗಳಿಗೆ ಅವಕಾಶವಿಲ್ಲದಂತೆ ಮೂಡಿ ಮಲರಿ ಬಾಳುತ್ತಿವೆ. ಬದುಕನ್ನು ಬೆಳಗಿಸುತ್ತಿವೆ.**

—ಶ್ರೀ ಕುವೆಂಪು

**ರಾಮಕೃಷ್ಣ ಮಹಾಸಂಘವು ನಮ್ಮ ಕಾಲದ ಅತ್ಯಂತ ವಿಶಿಷ್ಟವಾದ ಧಾರ್ಮಿಕ ಚಳುವಳಿ ಎಂದು ನಿಸ್ಸಂದೇಹವಾಗಿ ಹೇಳಬಹುದು.**

– ಕ್ರಿಸ್ಟೋಫರ್ ಇಶರ್‌ವುಡ್ (ಅಮೆರಿಕದ ಪ್ರಸಿದ್ಧ ಲೇಖಕ)

**ರಾಮಕೃಷ್ಣ ಮಹಾಸಂಘವು ಭಾರತದ ಇಂದಿನ ಅತ್ಯಂತ ಪ್ರಮುಖ ಮತ್ತು ಧಾರ್ಮಿಕ ಶೈಕ್ಷಣಿಕ ಸಂಸ್ಥೆಗಳಲ್ಲಿ ಒಂದಾಗಿದೆ. ರಾಮಕೃಷ್ಣ ಮತ್ತು ವಿವೇಕಾನಂದರ ಆದರ್ಶಕ್ಕೆ ಅನುಗುಣವಾಗಿ ತರಬೇತಿ ಹೊಂದಿರುವವರ ನಾಯಕತ್ವದಲ್ಲಿ ನಡೆಯುತ್ತಿರುವ ರಾಮಕೃಷ್ಣ ಕೇಂದ್ರಗಳು ಪುರಾತನವಾದ ಸನಾತನ ಸತ್ಯಗಳನ್ನು ಹೊಸ ವ್ಯಾಖ್ಯಾನದೊಂದಿಗೆ ಜೀವನದಲ್ಲಿ ಅನುಷ್ಠಾನಗೊಳಿಸಿದರೆ ಅವು ಇಂದಿಗೂ ಮೌಲ್ಯವುಳ್ಳವುಗಳಾಗುತ್ತವೆ ಎಂಬುದಕ್ಕೆ ಜೀವಂತ ಸಾಕ್ಷಿಯಾಗಿವೆ.**

– ಶ್ರೀ ಫ್ಲಾಯ್ಡ್ ಹೆಚ್. ರಾಸ್ (ವಿಶ್ವಧರ್ಮದ ಪ್ರೊಫೆಸರ್, ದಕ್ಷಿಣ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯ, ಅಮೆರಿಕ)